**ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.**

**ಉಪಸ್ಥಿತರುಃ- ಶ್ರೀ ರಾಹುಲ ರಾವ್ ಬಿ.ಎ.ಎಲ್.ಎಲ್.ಬಿ**
**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ,**

**ಸಿ.ಸಿ. ನಂಃ 66/2025**

**ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ ಯಾದಗಿರಿ (ಗ್ರಾ) ಪೊಲೀಸ್ ಠಾಣೆ**

**// ವಿರುದ್ದ //**

**ಆರೋಪಿ ಃ ಮಲ್ಲಪ್ಪ ಮತ್ತು ಇತರರು.**

**ಆಪಾದನೆ**

ನಾನುಃ **ಶ್ರೀ ರಾಹುಲ ರಾವ್ ಬಿ.ಎ.ಎಲ್.ಎಲ್.ಬಿ** ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ ಆದ ನಾನು ಆರೋಪಿಗಳಾದ

| | |
|---|---|
| ಆರೋಪಿ 1. | ಮಲ್ಲಪ್ಪ ತಂದೆ ಬಸಪ್ಪ @ ದೊಡ್ಡಬಸಪ್ಪ, ವಃ 35 ವರ್ಷ, |
| 2. | ಅಶೋಕ ತಂದೆ ಸಬಪ್ಪ ಮಲ್ಲಬಾದಿ, ವಃ 23 ವರ್ಷ, |
| 3. | ಬಂಡಾರೆಪ್ಪ ತಂದೆ ಬಸಪ್ಪ ಮಲ್ಲಬಾದಿ, ವಃ 41 ವರ್ಷ, |
| | ಎಲ್ಲರೂ ಸಾಃ ಯರಗೋಳ ಗ್ರಾಮ,<br>ತಾಃ ಜಿಃ ಯಾದಗಿರಿ. |

**ನಿಮ್ಮ ವಿರುದ್ಧ ದೋಷಿಸುವ ಆಪಾದನೆ ಏನೆಂದರೆ,**

ಮೊದಲನೆಯದಾಗಿ ದಿನಾಂಕಃ 03-10-2024 ರಂದು ಬೆಃ 07-30 ಗಂಟೆಗೆ ಯಾದಗಿರಿ (ಗ್ರಾ) ಪೋಲಿಸ್ ಠಾಣೆ ಸರಹದ್ದಿಲ್ಲಿ ಬರುವ ಯರಗೋಳ ಗ್ರಾಮದ ಫಿರ್ಯಾದಿ ಮನೆ ಮುಂದೆ ಚಾಸಾಃ1 ಮತ್ತು 4 ರವರು ತಮ್ಮ ಮನೆಯ ಹತ್ತಿರ ಇರುವಾಗ

ಆರೋಪಿತರಾದ ನೀವು ಕೈಯಲ್ಲಿ ಕಟ್ಟಿಗೆ ಬಡಿಗೆ ಮತ್ತು ಕಲ್ಲು ಹಿಡಿದುಕೊಂಡು ಹೋದವರೆ ಏ ರಂಡಿ ಮಕ್ಕಳೆ ನಿಮಗೆ ಎಷ್ಟು ಸಾಕಿ ಹೇಳ ಬೇಕು ಮನೆ ಖಾಲಿ ಮಾಡರ್ರಿ ಇಲ್ಲಿ ಇರಬಾರದು ನೀವು ಅಂತಾ ಹೇಳಿದರು ನಮ್ಮ ಮಾತು ಕೇಳೊದಿಲ್ಲ ರಂಡಿ ಮಕ್ಕಳೆ ಅಂತಾ ಅವಾಚ್ಯ ಶಬ್ದಗಳಿಂದ ಬೈದಿದ್ದು, ಈ ಮೂಲಕ ನೀವು ಭಾ.ದಂ.ಸಂ. 352 ಸಹ ಕಲಂ 3(5) ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

2. ಈ ಮೇಲೆ ಹೇಳಿದ ದಿನಾಂಕ, ಸಮಯ ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ 2 ನೇ ಆರೋಪಿಯಾದ ನೀನು ಚಾಸಾಃ1 ಮತ್ತು 4 ರವರಿಗೆ ನೆಲಕ್ಕೆ ಹಾಕಿ ಕಾಲಿನಿಂದ ಹೊಟ್ಟೆಗೆ ಬೆನ್ನಿಗೆ ಒದ್ದು ಗುಪ್ತ ಪೆಟ್ಟು ಮಾಡಿದ್ದು, ಈ ಮೂಲಕ ಭಾ. ದಂ. ಸಂ. ಕಲಂ 115(2) ಸಹ ಕಲಂ 3(5) ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

3. ಈ ಮೇಲೆ ಹೇಳಿದ ದಿನಾಂಕ, ಸಮಯ ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ 1 ನೇ ಆರೋಪಿಯಾದ ನೀನು ಚಾಸಾಃ4 ರವರಿಗೆ ತನ್ನ ಕೈಯಲ್ಲಿದ್ದ ಕಟ್ಟಿಗೆಯಿಂದ ಬೀಸಿ ಹೊಡೆದಾಗ ಎಡಗಣ್ಣಿಗೆ ಬಡಿದು ಗುಪ್ತಗಾಯವಾಗಿದ್ದು, 3 ನೇ ಆರೋಪಿಯಾದ ನೀನು ಚಾಸಾಃ4 ರವರಿಗೆ ಕಲ್ಲಿನಿಂದ ಹೊಡೆದಿದ್ದರಿಂದ ಬಾಯಿಗೆ ಮತ್ತು ಮೂಗಿಗೆ ಬಡಿದು ರಕ್ತಗಾಯ ಮತ್ತು ಗುಪ್ತಗಾಯವಾಗಿದ್ದು, 2 ನೇ ಆರೋಪಿಯಾದ ನೀನು ಚಾಸಾಃ1 ರವರಿಗೆ ಕಟ್ಟಿಗೆಯಿಂದ ಹೊಡೆದಾಗ ಕಟ್ಟಿಗೆ ಏಟು ಎಡ ಹಣೆಗೆ ಬಡಿದು ಗುಪ್ತ ಪೆಟ್ಟು ಮಾಡಿದ್ದು, ಈ ಮೂಲಕ ಭಾ. ದಂ. ಸಂ. ಕಲಂ 118(1) ಸಹ ಕಲಂ 3(5) ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

4. ಈ ಮೇಲೆ ಹೇಳಿದ ದಿನಾಂಕ, ಸಮಯ ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಆರೋಪಿತರಾದ ನೀವು ಚಾಸಾಃ1 ಮತ್ತು 4 ರವರಿಗೆ ಲೇ ಸೂಳೆ ಮಕ್ಕಳೆ ಇವತ್ತು ಒಂದು ಗತಿ ಕಾಣಿಸುತ್ತೇವೆ ಅಂತಾ ಜೀವದ

ಬೆದರಿಕೆ ಹಾಕಿದ್ದು, ಈ  ಮೂಲಕ ಭಾ. ದಂ. ಸಂ. ಕಲಂ 351(2) ಸಹ ಕಲಂ 3(5) ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯವ ಭಾಷಯಲ್ಲಿ ಓದಿ ಹೇಳಲಾಯಿತು)

**ದಿನಾಂಕಃ 16-06-2025**
**ಸ್ಥಳಃ  ಯಾದಗಿರಿ**

**ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ**
**ನ್ಯಾಯಾಧೀಶರು ಯಾದಗಿರಿ.**